## ಸಿನಿಮಾ ಆಗಿದ್ದು ಹೇಗೆ?

1970ರ ದಶಕದಲ್ಲಿ ಗೋಕಾಕ ಕಂಪನಿಯಲ್ಲಿ ‘ಸಂಪತ್ತಿಗೆ ಸವಾಲ್’ ನಾಟಕ ಪ್ರದರ್ಶನ ನಡೆಯುತ್ತಿದ್ದಾಗ, ಕಂಪನಿಯ ಮಾಲೀಕರನ್ನು ವೈಯಕ್ತಿಕ ಆರ್ಥಿಕ ವ್ಯವಹಾರಕ್ಕಾಗಿ ಭೇಟಿಯಾಗಲು ಹಿರಿಯ ನಟ ಬಾಲಕೃಷ್ಣ ಅವರು ಬಂದಿದ್ದರು. ಆ ಸಂದರ್ಭದಲ್ಲಿ ಈ ನಾಟಕ ನೋಡಿದ್ದ ಅವರಿಗೆ ಇದನ್ನು ಸಿನಿಮಾ ಆಗಿ ನೋಡುವ ಆಲೋಚನೆ ಬರುತ್ತದೆ. ಈ ಕಥಾವಸ್ತುವಿನ ಬಗ್ಗೆ ವರನಟ ರಾಜಕುಮಾರ್ ಅವರಿಗೆ ಹೇಳಿ ಸಿನಿಮಾ ಮಾಡಲು ಪ್ರೇರೇಪಿಸುತ್ತಾರೆ.

‘ಸಂಪತ್ತಿಗೆ ಸವಾಲ್’ ಕತೆಯ ಸಿನಿಮಾ ಹಕ್ಕುಗಳನ್ನು ಪಿ.ಬಿ. ಧುತ್ತರಗಿಯವರು ನಿರ್ಮಾಪಕರಿಗೆ ಮಾರಾಟ ಮಾಡುತ್ತಾರೆ. ಡಾ. ರಾಜಕುಮಾರ್ ಮೊದಲ ಬಾರಿ ‘ಯಾರೇ ಕೂಗಾಡಲಿ... ಊರೇ ಹೋರಾಡಲಿ’ ಹಾಡು ಹಾಡುವ ಮೂಲಕ ತಮ್ಮ ಚಿತ್ರಗಳಿಗೆ ತಾವೇ ಹಾಡಲು ಪ್ರಾರಂಭಿಸಿದರು. ‘ಭದ್ರ’ ಎಂಬ ಸಿಡಿಗುಂಡಿನಂಥ ಯುವಕನ ಪಾತ್ರದಲ್ಲಿ ದುಡಿಯುವ ಜನರ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಂಥ ಪಾತ್ರದಲ್ಲಿ ರಾಜ್ ಮಿಂಚಿದರು.

‘ಸಂಪತ್ತಿಗೆ ಸವಾಲ್’ ಸಿನಿಮಾ ರಾಜಕುಮಾರ್ ಹಾಗೂ ನಿರ್ಮಾಪಕರಿಗೆ ಸಂಪತ್ತು ತಂದುಕೊಟ್ಟರೆ, ಸವಾಲು ಮಾತ್ರ ತಮಗೆ ಉಳಿಯಿತು ಎಂದು ಪಿ.ಬಿ. ಧುತ್ತರಗಿಯವರು ಆಗಾಗ ಲಘು ವಿಡಂಬನೆಯೊಂದಿಗೆ ಹೇಳುತ್ತಿದ್ದರು. ಬಡತನದಲ್ಲಿಯೇ ಜೀವನ ಸವೆಸಿದ ಪಿ.ಬಿ. ಧುತ್ತರಗಿಯವರು ಬದುಕಿನುದ್ದಕ್ಕೂ ಸವಾಲುಗಳನ್ನೇ ಎದುರಿಸಿದರು.





‘ಸಂಪತ್ತಿಗೆ ಸವಾಲ್’ ಸಿನಿಮಾದಲ್ಲಿ ಡಾ. ರಾಜಕುಮಾರ್ ಮತ್ತು ಮಂಜುಳಾ

## ಸಂಭಾಷಣೆಗಳೇ ನಾಟಕದ ಜೀವಾಳ

ಪ್ರೇಕ್ಷಕರನ್ನು ಹಿಡಿದಿಡುವ ವಿಶೇಷ ಸಂಭಾಷಣೆಗಳೇ ಈ ನಾಟಕದ ಜೀವಾಳ. ನಾಟಕದಲ್ಲಿನ ಪ್ರತಿಯೊಂದು ಸಂಭಾಷಣೆಯು ಮುಂದಿನ ಪಾತ್ರಗಳ ಮಾತುಗಳಿಗೆ ಕೊಂಡಿಯಾಗಿ ಮುಂದುವರೆಯುತ್ತವೆ.

ಕವಿಗಳು (ನಾಟಕಕಾರರು) ಬರೆದ ಪದಗಳನ್ನು ಬಿಟ್ಟು ಬೇರೆ ಸಂಭಾಷಣೆ ಹೇಳಿದರೆ ಸಹ ಪಾತ್ರಧಾರಿಗಳಿಗೆ ಸನ್ನಿವೇಶ ಮುಂದುವರೆಸುವುದು ಕಷ್ಟವಾಗುತ್ತದೆ. ನಾಟಕಕಾರನ ಕಲಾತ್ಮಕ ಬರವಣಿಗೆ ಹಾಗೂ ಪ್ರೌಢಿಮೆಗೆ ಈ ನಾಟಕ ಸಾಕ್ಷಿಯಾಗಿದೆ. ಛತ್ರಪತಿ ಶಿವಾಜಿ, ಕಿತ್ತೂರು ಚೆನ್ನಮ್ಮ, ವೀರ ಸಿಂಧೂರ ಲಕ್ಷ್ಮಣ, ಸುರಪುರದ ವೆಂಕಟಪ್ಪನಾಯಕ, ಚಿತ್ರದುರ್ಗದ ಮದಕರಿನಾಯಕ ಮೊದಲಾದ ಐತಿಹಾಸಿಕ ನಾಟಕಗಳು, ಮುದುಕನ ಮದುವೆ, ಚಿಕ್ಕಸೊಸೆ ಮೊದಲಾದ ಸಾಮಾಜಿಕ ನಾಟಕಗಳು ಹಾಗೂ ಶ್ರೀದೇವಿ ಮಹಾತ್ಮೆ ಪೌರಾಣಿಕ ನಾಟಕ ಸೇರಿದಂತೆ 60ಕ್ಕೂ ಹೆಚ್ಚು ನಾಟಕಗಳು ಪಿ.ಬಿ. ಧುತ್ತರಗಿ ಅವರ ಲೇಖನಿಯಿಂದ ಮೂಡಿಬಂದಿವೆ.

ದಿ. ಪುಂಡಲೀಕಪ್ಪ ಬಸನಗೌಡ ಧುತ್ತರಗಿ ಕೂಡ ಪ್ರಮುಖರು. ಅವರು ಸುಮಾರು ಐವತ್ತು ವರ್ಷಗಳ ಹಿಂದೆ, ಅಂದರೆ 1970ರ ದಶಕದಲ್ಲಿ ರಚಿಸಿದ ‘ಸಂಪತ್ತಿಗೆ ಸವಾಲ್’ ನಾಟಕ ಉತ್ತರ ಕರ್ನಾಟಕದ ಕಂಪನಿ ನಾಟಕಗಳ ಬಾಕ್ಸ್ ಆಫೀಸಿನಲ್ಲಿ ಉತ್ತಮ ಕಲೆಕ್ಷನ್ ಮಾಡಿತ್ತಲ್ಲದೇ, ಮುಂದೆ ಸಿನಿಮಾ ಆಗಿಯೂ ಸಾಕಷ್ಟು ಜನಪ್ರಿಯಗೊಂಡಿತು. ಕಂಪನಿ ನಾಟಕಗಳ ಘನತೆಗೆ ಪ್ರಮುಖ ಗರಿಯಾಗಿರುವ ಪಿ.ಬಿ.ಧುತ್ತರಗಿ ವಿರಚಿತ ‘ಸಂಪತ್ತಿಗೆ ಸವಾಲ್’ ನಾಟಕವು 50 ವರ್ಷಗಳ ನಂತರವೂ ತನ್ನ ಪ್ರಸ್ತುತತೆ ಉಳಿಸಿಕೊಂಡಿದೆ.

ದಿ. ಪಿ.ಬಿ. ಧುತ್ತರಗಿ ಹಾಗೂ ಅವರ ಪತ್ನಿ ರಂಗಭೂಮಿ ನಟಿ ದಿ. ಸರೋಜಮ್ಮ ಧುತ್ತರಗಿ ಅವರ ಸ್ಮರಣಾರ್ಥ ಕೊಪ್ಪಳ ಜಿಲ್ಲೆ ಹನುಮಸಾಗರದ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗಕಲಾವಿದರ ಸಂಘವು ಇತ್ತೀಚೆಗೆ (ನವೆಂಬರ್ 18) ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೊಪ್ಪಳದ ಹವ್ಯಾಸಿ ಪತ್ರಕರ್ತರ ಬಳಗ ಅಭಿನಯಿಸಿದ ‘ಸಂಪತ್ತಿಗೆ ಸವಾಲ್’ ನಾಟಕವು, ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವ ವೃತ್ತಿ ರಂಗಭೂಮಿಯ ಕಂಪನಿ ನಾಟಕಗಳ ಘನತೆಯನ್ನು ನಾಡಿನ ಸಾಂಸ್ಕೃತಿಕ ಲೋಕಕ್ಕೆ ಮತ್ತೊಮ್ಮೆ ಸಾರಿ ಹೇಳಿತು.

ಧುತ್ತರಗಿಯವರ ಶ್ರೀಸಿದ್ದಲಿಂಗ ವಿಜಯ ನಾಟ್ಯ ಸಂಘ ಸೇರಿದಂತೆ ಹಲವಾರು ಕಂಪನಿಗಳಲ್ಲಿ ಈ ನಾಟಕ ನೂರಾರು ಪ್ರದರ್ಶನ ಕಂಡಿದೆ.

1970ರ ದಶಕದಲ್ಲಿ ಪ್ರಖರವಾಗಿದ್ದ ಬಂಡಾಯ, ರೈತ ಬಂಡಾಯದ ಸಾಮಾಜಿಕ, ಆರ್ಥಿಕ ವಿಚಾರಗಳನ್ನು ಸರಳವಾಗಿ ವೃತ್ತಿ ರಂಗಭೂಮಿ ಮೂಲಕ ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ತಲುಪಿಸಿತು. ಗ್ರಾಮೀಣ ಬದುಕಿನ ಫ್ಯೂಡಲ್ (ಊಳಿಗಮಾನ್ಯ) ಮನಸ್ಥಿತಿಗಳನ್ನು ಮರಿಯಪ್ಪ, ಲಕ್ಷ್ಮೀ ಪಾತ್ರಗಳ ಮೂಲಕ ಸಮರ್ಥವಾಗಿ ಅನಾವರಣಗೊಳಿಸಿದರು. ಅಕ್ಷರ ಬಲ್ಲ, ಕಾಯ್ದೆ ಕಾನೂನುಗಳನ್ನು ಅರಿತು ಗ್ರಾಮಲೆಕ್ಕಿಗ ವೃತ್ತಿ ನಿರ್ವಹಿಸುತ್ತಿದ್ದವರ ನಯವಂಚಕತನವನ್ನು ಕುಲಕರ್ಣಿ ವೆಂಕಪ್ಪನ ಪಾತ್ರ, ಸಿರಿವಂತರ ಮಕ್ಕಳ ಸೊಕ್ಕು, ಅಹಮಿಕೆಯನ್ನು ಲಕ್ಷ್ಮೀ ಪಾತ್ರವು ರಂಗದ ಮೇಲೆ ತಂದರೆ, ನಾಟಕದ ನಾಯಕ ಜೀತಗಾರರ ಕುಟುಂಬದ ಭದ್ರಿಯ ಪಾತ್ರ ವ್ಯವಸ್ಥೆಯ ವಿರುದ್ಧದ ಹೊಡೆಯುವ ಸೆಡ್ಡು, ಸಿರಿವಂತರ ಸಂಪತ್ತಿಗೆ ಹಾಕುವ ಸವಾಲು ನಾಟಕದ ಪ್ರಧಾನ ಅಂಶವಾಗಿ ಮನೋಜ್ಞವಾಗಿ ಮೂಡಿಬಂದಿತು.

ವೃತ್ತಿರಂಗಭೂಮಿ ನಾಟಕಗಳ ಸಾಧ್ಯತೆಗಳು ಹಾಗೂ ಮಹತ್ವದ ಅವಲೋಕನ ಮಾಡಿಕೊಳ್ಳಲು ‘ಸಂಪತ್ತಿಗೆ ಸವಾಲ್’ ಚಿಂತನೆಯೊಂದನ್ನು ಹರಿಯಬಿಟ್ಟಿದೆ. ■